ಅ) ಹೌದು

ಆ) ಹೌದು

ಇ) ಸದರಿ ಸಂಘದಲ್ಲಿನ ಅವ್ಯವಹಾರಗಳ ಬಗ್ಗೆ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಧಾರವಾಡ ಉಪ ವಿಭಾಗ, ಧಾರವಾಡ, ಇವರು ದಿನಾಂಕ: 4-3-99ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರ ವಿಚಾರಣೆಗೆ ಆದೇಶಿಸಿದ್ದು, ವಿಚಾರಣೆ ಪ್ರಗತಿಯಲ್ಲಿದೆ. ವಿಚಾರಣಾ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಕೊಳಚೆ ನಿರ್ಮೂಲನ ಮಂಡಳಿಯ ಕಾಮಗಾರಿ.

1541(2220) ಶ್ರೀ ಕುನ್ನೂರು ಮಂಜುನಾಥ ಚನ್ನಪ್ಪ (ಶಿಗ್ಗಾಂವಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ತೆಗೆದುಕೊಂಡ ಕಾಮಗಾರಿಗಳು ಯಾವುವು;

ಆ) ಅವುಗಳ ಪ್ರಗತಿ ಯಾವ ಹಂತದಲ್ಲಿವೆ;

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ಮಂಡಳಿಯ ಮತಿಯಿಂದ 1998-99ನೇ ಸಾಲಿನ ಅಂತ್ಯದವರೆಗೆ ಶಿಗ್ಗಾಂವ್‌ನಲ್ಲಿ 5 ಕೊಳಚೆ ಪ್ರದೇಶಗಳಲ್ಲಿ 13.50 ಲಕ್ಷ ರೂ.ಗಳಲ್ಲಿ ಹಾಗೂ ಸವಣೂರಿನಲ್ಲಿ 4 ಕೊಳಚೆ ಪ್ರದೇಶಗಳಲ್ಲಿ 8.38 ಲಕ್ಷ ರೂ.ಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

1999-2000ನೇ ಸಾಲಿನ ಕ್ರಿಯಾ ಯೋಜನೆಯಡಿ ಶಿಗ್ಗಾಂವ್‌ನ ಕುಂಚಿ ಕೊರವರ ಓಣಿ ಮತ್ತು ಸಾಲಗಾರ ಓಣಿ ಕೊಳಚೆ ಪ್ರದೇಶಕ್ಕೆ ಅಂದಾಜು ತಲಾ ರೂ. 1.00 ಲಕ್ಷಗಳಂತೆ ಒಟ್ಟು 2.00 ಲಕ್ಷ ವೆಚ್ಚದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಹಣ ನಿಗಧಿಪಡಿಸಲಾಗಿದೆ ಹಾಗೂ ಇದೇ ಸಾಲಿನಲ್ಲಿ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ ವಿದ್ಯಾಗಿರಿ ಕೊಳಚೆ ಪ್ರದೇಶಕ್ಕೆ 1.50 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಚರಂಡಿ ಮತ್ತು ಬೀದಿ ದೀಪ ಕಾಮಗಾರಿ ಕೈಗೊಳ್ಳಲು ಹಣ ನಿಗಧಿಪಡಿಸಲಾಗಿದೆ. ಮತ್ತು ಸವಣೂರಿನ ಲಾಲಸಾನ ಕಟ್ಟಿ ಪ್ರದೇಶದಲ್ಲಿ 1.00 ಲಕ್ಷದಿಂದ ಚರಂಡಿ ನಿರ್ಮಿಸಲು ಹಣ ನಿಗಧಿಪಡಿಸಲಾಗಿದೆ. ಹಾಗೂ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ ರೂ. 1.50 ಲಕ್ಷ ಅಂದಾಜಿನಲ್ಲಿ ಚರಂಡಿ, ಬೀದಿ ದೀಪ ಕಾರ್ಯಕ್ರಮಕ್ಕೆ ಹಣ ನಿಗಧಿಪಡಿಸಲಾಗಿದೆ.

ಹುಡ್ಕೋ ಯೋಜನೆಯಡಿ ಶಿಗ್ಗಾಂವ್‌ನಲ್ಲಿ 80 ಮನೆಗಳನ್ನು ಹಾಗೂ ಸವಣೂರಿನಲ್ಲಿ ಹುಡ್ಕೋ ಯೋಜನೆಯಡಿ 56 ಮನೆಗಳನ್ನು ಹಾಗೂ ವಿಶೇಷ ಘಟಕ ಯೋಜನೆಯಡಿ 50 ಮನೆಗಳ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.